**2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ನಂಜನಗೂಡು**

ಸಿ.ಸಿ ನಂ.1795/2018

ಫಿರ್ಯಾದಿ ನಂಜನಗೂಡು ಸಂಚಾರಿ ಪೋಲೀಸ್ ಠಾಣೆ

**ವಿರುದ್ಧ**

ಆರೋಪಿ ಆರ್ ಸೋಮಶೇಖರ್ ಬಿನ್ ರಾಚಯ್ಯ, 38 ವರ್ಷ,
ವಾಟರ್ ಟ್ಯಾಂಕ್ ಹತ್ತಿರ, ಅಂಬೇಡ್ಕರ್ ಬೀದಿ, ಇಲಾವಾಲ ಗ್ರಾಮ,
ಮೈಸೂರು.

**ಆರೋಪಣೆ**

ಶ್ರೀಮತಿ ವಿನುತ ಡಿ. ಎಸ್., ಬಿ.ಎಸ್ಸಿ (ಅಗ್ರಿಕಲ್ಚರ್) , ಎಲ್.ಎಲ್.ಬಿ. 2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರಾದ ನಾನು ನಿಮ್ಮ ಮೇಲೆ ಆಪಾದಿಸುವುದೇನೆಂದರೆ:

ದಿನಾಂಕ:19.08.2018 ರಂದು ಬೆಳಿಗ್ಗೆ 10.30 ಸಮಯದಲ್ಲಿ ನಂಜನಗೂಡು ಸಂಚಾರಿ ಪೋಲೀಸ್ ಠಾಣಾ ಸರಹದ್ದು ನಂಜನಗೂಡುಪಟ್ಟಣ, ನಂಜನಗೂಡು - ಚಾಮರಾಜನಗರ ಮುಖ್ಯ ಬೈಪಾಸ್ ರಸ್ತೆಯಲ್ಲಿರುವ ಹೊಸದಾದ ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದ ಹೊರಗೆ ಬರುವ ಗೇಟಿನ ಮುಂಭಾಗ ನಂಜನಗೂಡು - ಚಾಮರಾಜನಗರ ಮುಖ್ಯ ರಸ್ತೆಯ ಎಡಭಾಗದ ಫುಟ್‌ಪಾತ್ ನಲ್ಲಿ ಆರೋಪಿಯಾದ ನೀವು ಕೆಎ-10-ಎಫ್-0209 ರ ನಂಬರಿನ ಕೆ ಎಸ್ ಆರ್ ಟಿ ಸಿ ಬಸ್ಸನ್ನು ಬಸ್ ನಿಲ್ದಾಣದಿಂದ ಪಕ್ಕದಲ್ಲಿರುವ ಡಿಪೋ ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಮಾನವ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡಿದ್ದು ಆ ಮೂಲಕ ಆರೋಪಿಯಾದ ನೀವು ಭಾ ದಂ ಸಂ ಕಲಂ 279 ರ ಅಡಿಯಲ್ಲಿ ದಂಡನೀಯವಾದ ಅಪರಾಧಗಳನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವಿರಿ.

ಎರಡನೇಯದಾಗಿ , ಅದೇ ದಿನ , ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ ಆರೋಪಿಯಾದ ನೀವು ಸದರಿ ವಾಹನವನ್ನು ಅತಿವೇಗವಾಗಿ ಹಾಗೂ ಅಜಾಗರೂಕತೆಯಿಂದ ಚಾಲನೆ ಬಂದು ಖಾಸಗಿ ಬಸ್ ನಿಲ್ದಾಣ ಕಡೆಯಿಂದ ಅಪೋಲೊ ವೃತ್ತದ ಕಡೆಗೆ ರಸ್ತೆಯ ಎಡಭಾಗ ನಡೆದುಕೊಂಡು ಹೋಗುತ್ತಿದ್ದ ಅಂಬುರವರಿಗೆ ಬಸ್ಸಿನ ಎಡಭಾಗದ ಬಾಡಿಯಿಂದ ತಗುಲಿದ ಪರಿಣಾಮ ಅಂಬುರವರು ಕೆಳಗಡೆ ಬಿದ್ದು ಬಸ್ಸಿನ ಎಡಭಾಗದ ಹಿಂಭಾಗ ಚಕ್ರ ಅವರ ತಲೆಯ ಮೇಲೆ ಹರಿದು ತೀವ್ರ ಸ್ವರೂಪದ ಗಾಯಗಳಾಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದು, ಆ ಮೂಲಕ ಆರೋಪಿಯಾದ ನೀವು ಭಾ ದಂ ಸಂ ಕಲಂ 304(ಎ) ರ ಅಡಿಯಲ್ಲಿ ದಂಡನೀಯವಾದ ಅಪರಾಧಗಳನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವಿರಿ.

ಕೊನೇಯದಾಗಿ , ಅದೇ ದಿನ , ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ ಆರೋಪಿಯಾದ ನೀವು ಮಾಡಿದ ಸದರಿ ಅಪಘಾತ ಮಾಡಿ ಗಾಯಾಳುವಿಗೆ ಚಿಕಿತ್ಸೆಯನ್ನು ಕೊಡಿಸದೆ ಹಾಗೂ ಪೋಲೀಸರಿಗೆ ಮಾಹಿತಿಯನ್ನು ನೀಡದೇ ಹೊರಟು ಹೋಗಿದ್ದು ಆ ಮೂಲಕ ಮೋಟಾರು ವಾಹನ ಕಾಯ್ದೆ ಕಲಂ 187 ರ ಅಡಿಯಲ್ಲಿ ದಂಡನೀಯವಾದ ಅಪರಾಧಗಳನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವಿರಿ.

ಸೋಮಶೇಖರ್

ಸದರಿ ಆರೋಪಿಸೆಯು ನನ್ನ ಸಂಜ್ಞಾನದಲ್ಲಿದ್ದು ವಿಚಾರಣೆಯು ಇದೇ ನ್ಯಾಯಾಲಯದಲ್ಲಿ ನಡೆಯುವಂತೆ ನಾನು ನಿರ್ದೇಶಿಸಿರುತ್ತೇನೆ.

ಪ್ರಶ್ನೆ:1: ಈಗ ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೇ?

ಉತ್ತರ: ತಿಳಿಯಿತು.

ಪ್ರಶ್ನೆ:2: ಮೇಲ್ಕಂಡ ಆರೋಪವನ್ನು ನೀವು ಒಪ್ಪಿಕೊಳ್ಳುವಿರೋ? ಅಥವಾ ಪ್ರತಿರಕ್ಷೆ ಮಾಡಿಕೊಳ್ಳ ಬಯಸುವಿರೋ?

ಉತ್ತರ: ತಪ್ಪು ಮಾಡಿಲ್ಲ ವಿಚಾರಣೆಯಾಗಲಿ.

ಮೇಲ್ಕಂಡ ಆಪಾದನೆಯನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಅವರು ಉತ್ತರಿಸಿದಂತೆಯೇ ತೆರೆದ ನ್ಯಾಯಾಲಯದಲ್ಲಿ ಬರೆದುಕೊಂಡಿದ್ದು ಆರೋಪಿ ನೀಡಿರುವ ಉತ್ತರವು ಸಂಪೂರ್ಣ ಹಾಗೂ ಸರಿಯಾದ ಮಾಹಿತಿ ಒಳಗೊಂಡಿದೆ ಎಂದು ನಾನು ಈ ಮೂಲಕ ದಿ:05.04.2022 ರಂದು ದೃಢೀಕರಿಸುತ್ತೇನೆ.

ಸೋಮಶೇಖರ

2 ನೇ ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.
ನಂಜನಗೂಡು